## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (427)358

ಸದಸ್ಯರ ಹೆಸರು : ಶ್ರೀ ಪಿ.ಆರ್.ರಮೇಶ್ (ನಾಮನಿರ್ದೇಶನ ಹೊಂದಿದವರು)

ಉತ್ತರಿಸುವ ದಿನಾಂಕ : 23-09-2020

ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಸ್ಥಾಪಿಸಲು ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ತಾಲ್ಲೂಕು ದೇವನಹಳ್ಳಿ ಕಸಬಾ ಹೋಬಳಿ ಮತ್ತು ಇತರೆ ಗ್ರಾಮಗಳಲ್ಲಿ ಬರುವ ಬಗರ್‌ಹುಕುಂ ಸಾಗುವಳಿ ಜಮೀನುಗಳನ್ನು ವಶಪಡಿಸಿಕೊಂಡು ಉಪಯೋಗಿಸಲಾಗಿದೆಯೇ; | ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧೀನ ಸಂಸ್ಥೆಯಾದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ವತಿಯಿಂದ ಭೂ ಸ್ವಾಧೀನ ಪ್ರಕ್ರಿಯೆ ಕೈಗೊಂಡು ಬಗರ್‌ಹುಕುಂ ಸಾಗುವಳಿ ಜಮೀನುಗಳನ್ನು ವಶಪಡಿಸಿಕೊಳ್ಳಲಾಗಿರುತ್ತದೆ. |
| ಆ) | ಹಾಗಿದ್ದರೆ, ಎಷ್ಟು ಪ್ರದೇಶದ (ಎಕರೆ) ಜಮೀನನ್ನು ವಶಪಡಿಸಿಕೊಳ್ಳಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಭೂ ಸ್ವಾಧೀನಪಡಿಸಿಕೊಂಡ ಜಮೀನುಗಳ ವಿವರಗಳು ಕೆಳಕಂಡಂತಿರುತ್ತವೆ. (see table below) |

| ಕ್ರ ಸಂ. | ಗ್ರಾಮಗಳ ಹೆಸರು | ಭೂ ಸ್ವಾಧೀನವಾಗಿರುವ ವಿಸ್ತೀರ್ಣ (ಎ-ಗುಂ) |
|---|---|---|
| 1 | ಅಣ್ಣೇಶ್ವರ | 458-39 |
| 2 | ದೊಡ್ಡಸಣ್ಣೆ | 278-35 |
| 3 | ಭುವನಹಳ್ಳಿ | 91-20 |
| 4 | ಉದಯಗಿರಿ | 117-15 |
| 5 | ಅರಿಶಿನಕುಂಟೆ | 721-15 |
| 6 | ಗಂಗಮುತ್ತನಹಳ್ಳಿ | 294-21 ½ |
| 7 | ಯರ್ತಿಗಾನಹಳ್ಳಿ | 210-00 |
| 8 | ಬೆಟ್ಟಕೋಟೆ | 146-06 |
| | **ಒಟ್ಟು** | **2318-31 ½** |

ಬಗರ್‌ಹುಕುಂ ಸಾಗುವಳಿ ಕೋರಿ ಅರ್ಜಿ ಸಲ್ಲಿಸಿದವರ ಸಂಖ್ಯೆ : 06, ವಿಸ್ತೀರ್ಣ 22-00ಎಕರೆ

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಇ) | ವಶಪಡಿಸಿಕೊಂಡ ಬಗರ್‌ಹುಕುಂ ಸಾಗುವಳಿ ಜಮೀನಿಗೆ ಭೂಸ್ವಾಧೀನ ಪರಿಹಾರ ನೀಡಲಾಗಿದೆಯೇ; (ಮಾಹಿತಿ ನೀಡುವುದು) | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯವರು ಪರಿಹಾರ ನೀಡಿರುವುದಿಲ್ಲ. |
| ಈ) | ಸದರಿ ನಿಲ್ದಾಣ ನಿರ್ಮಾಣಕ್ಕೆ ವಶಪಡಿಸಿಕೊಂಡ ಬಗರ್‌ಹುಕುಂ ಸಾಗುವಳಿದಾರರು ಕರ್ನಾಟಕ ಉಚ್ಚ ನ್ಯಾಯಾಲಯದ ಮೊರೆ ಹೋಗಿ ಸರ್ಕಾರದ ವಿರುದ್ಧ ಯಾವುದಾದರೂ ಆದೇಶಗಳನ್ನು ಪಡೆದಿರುತ್ತಾರೆಯೇ; (ವಿವರವಾದ ಮಾಹಿತಿ ನೀಡುವುದು) | ಶ್ರೀಮತಿ ಚಂದ್ರಕಲ ಕೋಂ ಆರ್. ಮಂಜುನಾಥ ಹಾಗೂ ಇತರೆ 179 ಜನರು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ.ನಂ.32598-32777/2016 (ಎಲ್‌ಎ-ಕೆಐಎಡಿಬಿ) ರಿಟ್ ಅರ್ಜಿ ಸಲ್ಲಿಸಿದ್ದು, ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲು ದಿ: 22.03.2018 ರಂದು ಆದೇಶವಾಗಿರುತ್ತದೆ. |

| | | |
|---|---|---|
| | | ಶ್ರೀ ಜಿ.ಎನ್. ನಾಗರಾಜು ಬಿನ್ ವೆಂಕಟಪ್ಪ ಹಾಗೂ ಇತರೆ 233 ಜನರು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದಲ್ಲಿ ಡಬ್ಲ್ಯೂ.ಪಿ.ನಂ.50185–50418/2017(ಎಲ್‌ಎ–ಕೆಐಎಡಿಬಿ) ರಿಟ್ ಅರ್ಜಿ ಸಲ್ಲಿಸಿದ್ದು, ಕಾನೂನು ರೀತ್ಯಾ ಕ್ರಮ ತೆಗೆದುಕೊಳ್ಳಲು ದಿ: 14.03.2018 ರಂದು ಆದೇಶವಾಗಿರುತ್ತದೆ. |
| ಉ) | ಪಡೆದಿದ್ದಲ್ಲಿ, ಕಂದಾಯ ಇಲಾಖೆ ಅಥವಾ ಅನ್ಯ ಇಲಾಖೆಗಳಿಂದ ನ್ಯಾಯಾಲಯದ ಆದೇಶದ ಪ್ರಕಾರ ಇಲ್ಲಿಯವರೆಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು) | ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಮೇಲ್ಕಂಡ ಆದೇಶಗಳ ಪ್ರಕಾರ ಪರಿಶೀಲಿಸಿ, ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ–94 ರಂತೆ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಕೋರಿ ಸಲ್ಲಿಸಿರುವ ಅರ್ಜಿಗಳು ನಿರ್ಬಂಧಿತ ಅಂತರದಲ್ಲಿ ಬರುವುದರಿಂದ ಅರ್ಜಿದಾರರ ಅರ್ಜಿಗಳನ್ನು ಪರಿಗಣಿಸಲು ಅವಕಾಶ ಇರುವುದಿಲ್ಲವೆಂದು, ಭೂ ಸಕ್ರಮೀಕರಣ ಸಮಿತಿ ಮುಂದೆ ಮಂಡಿಸಲು ಅರ್ಹರಾಗಿರುವುದಿಲ್ಲವೆಂದು ತಿಳಿಸಿ ಶ್ರೀ ಎನ್. ವೀರಣ್ಣ, ಜಿಲ್ಲಾಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ, ದೇವನಹಳ್ಳಿ ಟೌನ್ ರವರಿಗೆ ದಿನಾಂಕ: 17.06.2019 ರಂದು ಸಂ:ಎಲ್‌ಎನ್‌ಡಿ. ಸಿಆರ್.12/2016–17ರ ಪ್ರಕಾರ ಹಿಂಬರಹ ನೀಡಲಾಗಿರುತ್ತದೆ. |

ಸಂಖ್ಯೆ: ಆರ್‌ಡಿ 111 ಎಲ್‌ಜಿಕ್ಯೂ 2020

(ಆರ್. ಅಶೋಕ)
ಕಂದಾಯ ಸಚಿವರು